R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು
ವಿಶೇಷ ರಾಜ್ಯ ಪತ್ರಿಕೆ

ಭಾಗ– IV Part– IV	ಬೆಂಗಳೂರು, ಬುಧವಾರ, 22, ಏಪ್ರಿಲ್, 2020 (ವೈಶಾಖ 02, ಶಕವರ್ಷ 1942) Bengaluru, WEDNESDAY, 22, APRIL, 2020 (Vaishakha 02, ShakaVarsha 1942)	ನಂ. 146 No. 146

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

C¢ş£ÀZÀ£É

ಸಂಖ್ಯೆ: ಸಂವ್ಯಶಾಇ 25 ಶಾಸನ 2020, ಬೆಂಗಳೂರು ದಿನಾಂಕ: 22.04.2020.

ಕರ್ನಾಟಕ ಸಾಂಕ್ರಾಮಿಕ ರೋಗಗಳ ಅಧ್ಯಾದೇಶ, 2020 EzP 2020g ಏಪ್ರಿಲ್ wAU¼ 22£Ã ¢£ÁAPzAzÄ gÁd¥Á®g M¦U zÆgwzÄ, ¸Á¤iÁ£ w¼Ä¤½PUÁV Ez£Ä 2020 g P£Áð¯P CzÁzÃ± ¸AS: 07 JA§ÄzÁV P£Áð¯P gÁd ¥vz° ¥Pn¸¨ÃPAzÄ DzÃ²¸¯ÁVz.

2020ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 07

ಕರ್ನಾಟಕ ಸಾಂಕ್ರಾಮಿಕ ರೋಗಗಳ ಅಧ್ಯಾದೇಶ, 2020

(ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯಪಾಲರಿಂದ ಪ್ರಖ್ಯಾಪಿತವಾಗಿ 2020ರ ಏಪ್ರಿಲ್ 22ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ರಾಜ್ಯದಲ್ಲಿ ಸಾಂಕ್ರಾಮಿಕ ರೋಗಗಳ ನಿಯಂತ್ರಣ ಮತ್ತು ತಡೆಗಟ್ಟುವಿಕೆಗೆ ಸಂಬಂಧಿಸಿದ ಕಾನೂನುಗಳನ್ನು ಏಕೀಕರಿಸಲು ಮತ್ತು ಕ್ರೋಢೀಕರಿಸಲು ಒಂದು ಅಧ್ಯಾದೇಶ.

ರಾಜ್ಯ ವಿಧಾನ ಮಂಡಲದ ಉಭಯ ಸದನಗಳು ಅಧಿವೇಶನದಲ್ಲಿ ಇಲ್ಲದಿರುವುದರಿಂದ ಮತ್ತು ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸಾಂಕ್ರಾಮಿಕ ರೋಗಗಳ ಅಧ್ಯಾದೇಶ, 2020ನ್ನು ಮಾಡಲು ಶ್ರೀಘ್ರ ಕ್ರಮವನ್ನು ತೆಗೆದು ಕೊಳ್ಳುವುದು ಅವಶ್ಯಗೊಳಿಸುವಂಥ ವಿದ್ಯಮಾನಗಳು ಉಂಟಾಗಿವೆಯೆಂದು ಕರ್ನಾಟಕದ ಮಾನ್ಯ ರಾಜ್ಯಪಾಲರಿಗೆ ಮನದಟ್ಟಾಗಿರುವುದರಿಂದ;

ಆದ್ದರಿಂದ, ಈಗ ಭಾರತ ಸಂವಿಧಾನದ 213ನೇ ಅನುಚ್ಛೇದದ (1)ನೇ ಖಂಡದಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕದ ಮಾನ್ಯ ರಾಜ್ಯಪಾಲರು ಈಮುಂದಿನ ಅಧ್ಯಾದೇಶವನ್ನು ಪ್ರಖ್ಯಾಪಿಸಿರುತ್ತಾರೆ, ಎಂದರೆ:-

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.- (1) ಈ ಅಧ್ಯಾದೇಶವನ್ನು ಕರ್ನಾಟಕ ಸಾಂಕ್ರಮಿಕ ರೋಗಗಳ ಅಧ್ಯಾದೇಶ, 2020 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. ಪರಿಭಾಷೆಗಳು.- ಈ ಅಧ್ಯಾದೇಶದಲ್ಲಿ ಸಂದರ್ಭವು ಅನ್ಯಥಾ ಅಗತ್ಯ ಪಡಿಸಿದ ಹೊರತು,-

(ಎ) "ಸಾಂಕ್ರಾಮಿಕ ರೋಗಗಳು" ಎಂದರೆ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆಯ ಮೂಲಕ ಸಾಂಕ್ರಾಮಿಕ ರೋಗ ಎಂಬುದಾಗಿ ಘೋಷಿಸಿದ ಯಾವುದೇ ರೋಗ;

(ಬಿ) "ಸರ್ಕಾರ" ಎಂದರೆ ಕರ್ನಾಟಕ ಸರ್ಕಾರ;

(ಸಿ) "ನಿಯಮಿಸಲಾದುದು" ಎಂದರೆ ಈ ಅಧ್ಯಾದೇಶದ ಅಡಿಯಲ್ಲಿ ಮಾಡಿದ ನಿಯಮಗಳು ಅಥವಾ ವಿನಿಯಮಗಳ ಮೂಲಕ ನಿಯಮಿಸಲಾದುದು;

(ಡಿ) "ವಿನಿಯಮ" ಎಂದರೆ ಈ ಅಧ್ಯಾದೇಶದ ಅಡಿಯಲ್ಲಿ ಮಾಡಿದ ವಿನಿಯಮಗಳು; ಮತ್ತು

(ಇ) "ರಾಜ್ಯ" ಎಂದರೆ ಕರ್ನಾಟಕ ರಾಜ್ಯ.

3.ಸಾಂಕ್ರಾಮಿಕ ರೋಗವನ್ನು ಅಧಿಸೂಚಿಸಲು ಸರ್ಕಾರದ ಅಧಿಕಾರ.- ಸರ್ಕಾರವು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ರಾಜ್ಯದಾದ್ಯಂತ ಅಥವಾಅದರ ಅಂಥ ಭಾಗ ಅಥವಾ ಭಾಗಗಳಲ್ಲಿ, ಈ ಅಧ್ಯಾದೇಶದ ಉದ್ದೇಶಗಳಿಗಾಗಿ ಸಾಂಕ್ರಾಮಿಕ ರೋಗ ಎಂದು ಯಾವುದೇ ರೋಗವನ್ನು ಸರ್ಕಾರಿ ರಾಜ್ಯಪತ್ರದಲ್ಲಿಅಧಿಸೂಚನೆಯ ಮೂಲಕ ಅಧಿಸೂಚಿಸಬಹುದು.

4.ಸಾಂಕ್ರಾಮಿಕ ರೋಗಕ್ಕೆ ವಿಶೇಷ ಕ್ರಮಗಳನ್ನು ತೆಗೆದುಕೊಳ್ಳುವ ಮತ್ತು ವಿನಿಯಮಗಳನ್ನು ನಿರ್ದಿಷ್ಟ ಪಡಿಸುವ ಅಧಿಕಾರ.- (1) ರಾಜ್ಯ ಅಥವಾ ಅದರ ಯಾವುದೇ ಭಾಗದಲ್ಲಿ ಯಾವುದೇ ಸಾಂಕ್ರಾಮಿಕ ರೋಗದ ಆಸ್ಫೋಟನೆಯು (outbreak) ಕಂಡು ಬಂದಿದೆ ಅಥವಾ ಭಯ ಭೀತಗೊಳಿಸಿದೆ ಎಂದು ಮನದಟ್ಟಾದರೆ, ಅಂಥರೋಗದ ಆಸ್ಫೋಟನೆ ಅಥವಾ ಯಾವೊಬ್ಬ ವ್ಯಕ್ತಿಅಥವಾ ವ್ಯಕ್ತಿಗಳ ವರ್ಗವು ಪಾಲಿಸಬೇಕಾದ ಅಂಥ ತಾತ್ಕಾಲಿಕ ವಿನಿಯಮಗಳು ಅಥವಾಆದೇಶಗಳನ್ನು ನಿರ್ದಿಷ್ಟ ಪಡಿಸಿ ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಆ ಉದ್ದೇಶಕ್ಕಾಗಿ ಅವಶ್ಯವೆಂದು ಭಾವಿಸುವ ಅಂಥ ಕ್ರಮಗಳನ್ನು ಯಾವುದೇ ಸಮಯದಲ್ಲಿ ಸರ್ಕಾರವು ಕೈಗೊಳ್ಳಬಹುದು ಹಾಗೂ ಸದರಿ ಅಧಿನಿಯಮಗಳು ಅಥವಾ

ಆದೇಶಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥಅಧಿಕಾರಗಳು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ಡೆಪ್ಯೂಟಿ ಕಮಿಷನರ್ ಮತ್ತು / ಅಥವಾ ಮುನಿಸಿಪಲ್ ಕಮಿಷನರುಗಳು ಇವರಿಗೆಅಗತ್ಯಪಡಿಸಬಹುದು ಅಥವಾ ಅಧಿಕಾರ ನೀಡಬಹುದು.

(2) ವಿಶೇಷವಾಗಿ ಮತ್ತು ಮುಂಬರುವ ಉಪಬಂಧಗಳ ಸಾಮಾನ್ಯನ್ವಯಕ್ಕೆ ಭಾದಕವಾಗದಂತೆ, ಸರ್ಕಾರವು ಕ್ರಮಗಳನ್ನು ತೆಗೆದುಕೊಳ್ಳಬಹುದು ಮತ್ತು ವಿನಿಯಮಗಳನ್ನುನಿರ್ದಿಷ್ಟ ಪಡಿಸಬಬಹುದು,-

(ಎ)ರಾಜ್ಯದೊಳಗೆ ಯಾವುದೇ ಗುಂಪು ಗೂಡುವಿಕೆ, ಆಚರಣೆ, ಆರಾಧನೆ ಅಥವಾ ಇತರ ಅಂಥ ಚಟುವಟಿಕೆಗಳಲ್ಲಿ ವ್ಯಕ್ತಿಯಿಂದ ವ್ಯಕ್ತಿಗೆ ಸಾಂಕ್ರಾಮಿಕ ರೋಗಗಳು ಸಾಕಷ್ಟು ಹರಡುತ್ತಿದೆ ಅಥವಾ ಪ್ರಸರಿಸುತ್ತಿದೆ ಎಂದು ಸರ್ಕಾರವು ಪರಿಗಣಿಸಿದರೆ, ಯಾವುದೇ ಬಳಕೆ ಅಥವಾ ಕಾರ್ಯವನ್ನು ನಿಷೇಧಿಸಲು;

(ಬಿ) ರಾಜ್ಯದಲ್ಲಿವಾಯುಮಾರ್ಗ, ರೈಲು, ರಸ್ತೆ, ಸಮುದ್ರ ಮಾರ್ಗ ಅಥವಾ ಯಾವುದೇ ಇತರ ಮಾರ್ಗಗಳಿಂದ ಬರುವ ವ್ಯಕ್ತಿಗಳನ್ನು ಪರೀಕ್ಷಿಸಲು ಅಥವಾ ವಿನಿಯಮ ಅಥವಾ ಆದೇಶಗಳಲ್ಲಿಅಧಿಕೃತಗೊಳಿಸಿದ ಅಧಿಕಾರಿಗಳ ಮೂಲಕಯಾವುದೇ ಅಂಥ ರೋಗದಿಂದ ಸೋಂಕಿತರೆಂದು ಶಂಕಿತರಾದ ವ್ಯಕ್ತಿಗಳನ್ನು ಆಸ್ಪತ್ರೆಯಲ್ಲಿ, ತಾತ್ಕಾಲಿಕ ತಂಗುದಾಣದಲ್ಲಿ, ನಿವಾಸದಲ್ಲಿ ಅಥವಾ ಅನ್ಯಥಾ ಪ್ರತ್ಯೇಕಗೊಳಿಸುವಿಕೆ (Quarantine) ಅಥವಾ ಸಂದರ್ಭಾನುಸಾರವಾಗಿ ಬೇರ್ಪಡಿಸುವಿಕೆಯನ್ನು (Isolation) ಮಾಡಲು;

(ಸಿ) ಅಗತ್ಯವೆಂದು ಭಾವಿಸಬಹುದಾದ ಅಂಥ ಅವಧಿಗಾಗಿ ರಾಜ್ಯ ಅಥವಾ ಜಿಲ್ಲಾ ಗಡಿಗಳನ್ನು ಮುಚ್ಚಲು (Seal);

(ಡಿ) ಸಾರ್ವಜನಿಕ ಮತ್ತು ಖಾಸಗಿ ಸಾರಿಗೆಯ ಕಾರ್ಯಾಚರಣೆಯ ಮೇಲೆ ನಿರ್ಬಂಧಗಳನ್ನು ವಿಧಿಸಲು;

(ಇ) ಸಾಮಾಜಿಕ ಅಂತರದ ರೂಢಿಗಳನ್ನು ನಿಯಮಿಸಲು;

(ಎಫ್) ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ಧಾರ್ಮಿಕ ಸಂಸ್ಥೆಗಳಲ್ಲಿ ವ್ಯಕ್ತಿಗಳ ಒಗ್ಗೂಡುವಿಕೆಯನ್ನು ನಿರ್ಬಂಧಿಸಲು ಅಥವಾ ನಿಷೇಧಿಸಲು;

(ಜಿ)

ರಾಜ್ಯದಲ್ಲಿಸರ್ಕಾರಿಮತ್ತುಖಾಸಗಿಕಛೇರಿಗಳುಹಾಗೂಶೈಕ್ಷಣಿಕಸಂಸ್ಥೆಗಳುಕಾರ್ಯನಿರ್ವಹಿಸುವುದನ್ನುನಿಯಂತ್ರಿಸಲುಅಥವಾ ನಿರ್ಬಂಧಿಸಲು;

(ಎಚ್) ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳು, ಕಾರ್ಖಾನೆಗಳು, ಕಾರ್ಯಾಗಾರಗಳು ಮತ್ತು ಗೋದಾಮುಗಳ ಕಾರ್ಯನಿವರ್ಹಿಸುವಿಕೆಯ ಮೇಲೆ ನಿಷೇಧ ಅಥವಾ ನಿರ್ಬಂಧಗಳನ್ನು ವಿಧಿಸಲು;

(ಐ) ಅಗತ್ಯ ಮತ್ತು ತುರ್ತು ಸೇವೆಗಳಾದಂತಹ ಬ್ಯಾಂಕುಗಳು, ಮಾಧ್ಯಮಗಳು, ಆರೋಗ್ಯ ರಕ್ಷಣೆ, ಆಹಾರ ಸರಬರಾಜು, ವಿದ್ಯುಚ್ಛಕ್ತಿ, ನೀರು, ಇಂಧನ ಇತ್ಯಾದಿಗಳ ಸೇವಾ ನೀಡಿಕೆ ಅವಧಿಯನ್ನು ನಿರ್ಬಂಧಿಸಲು;

(ಜೆ) ಸಾಮಾಜಿಕ, ರಾಜಕೀಯ, ಕ್ರೀಡೆಗಳು, ಮನರಂಜನೆ, ಶೈಕ್ಷಣಿಕ, ಸಾಂಸ್ಕೃತಿಕ ಅಥವಾ ಧಾರ್ಮಿಕ ಸಮಾರಂಭಗಳು ಅಥವಾ ಒಗ್ಗೂಡುವಿಕೆಗಳನ್ನು ನಿರ್ಬಂಧಿಸಲು; ಮತ್ತು

(ಕೆ) ಸರ್ಕಾರವು ನಿರ್ಧರಿಸಲಾದಂತೆ ಸಾಂಕ್ರಾಮಿಕ ರೋಗಗಳ ನಿಯಂತ್ರಣ ಮತ್ತು ತಡೆಗಟ್ಟುವಿಕೆಗಾಗಿ ಅವಶ್ಯವಾಗ ಬಹುದಾದ ಅಂಥ ಇತರ ಕ್ರಮಗಳು.

5. ಸಾರ್ವಜನಿಕ ನೌಕರನ ಅಡಚಣೆಯ ಅಥವಾ ಉಲ್ಲಂಘನೆಯ ನಿಷೇಧ.- (1) ಯಾವೊಬ್ಬ ವ್ಯಕ್ತಿ, ಸಂಸ್ಥೆ ಅಥವಾ ಕಂಪನಿಯು ಈ ಅಧ್ಯಾದೇಶದ ಅಡಿಯಲ್ಲಿ ಮಾಡಲಾದ 4ನೇ ಪ್ರಕರಣದ, ನಿಯಮಗಳ, ವಿನಿಯಮದ ಅಥವಾ ಆದೇಶದ ಯಾವುದೇ ಉಪಬಂಧಗಳನ್ನು ಉಲ್ಲಂಘಿಸತಕ್ಕದ್ದಲ್ಲಅಥವಾ ಪಾಲಿಸದಿರತಕ್ಕದ್ದಲ್ಲ.

(2) ಯಾವೊಬ್ಬ ವ್ಯಕ್ತಿಯು, ಈ ಅಧ್ಯಾದೇಶದ ಅಡಿಯಲ್ಲಿ ಮಾಡಲಾದ ನಿಯಮಗಳು, ವಿನಿಯಮಗಳು ಅಥವಾ ಆದೇಶಗಳ ಯಾವುವೇ ಉಪಬಂಧಗಳ ಅನುಸರಣೆಯಲ್ಲಿ ಯಾವುದೇ ಕರ್ತವ್ಯವನ್ನು ಮಾಡುತ್ತಿರುವ ಅಥವಾ ಕರ್ತವ್ಯವನ್ನು ಮಾಡುತ್ತಿರುವನೆಂದು ತಾತ್ಪರ್ಯವಾಗುವ ಅಥವಾ ಯಾವುದೇ ಕರ್ತವ್ಯವನ್ನು ನಿರ್ವಹಿಸುತ್ತಿರುವ ಯಾವೊಬ್ಬ ಅಧಿಕಾರಿ ಅಥವಾ ಯಾವೊಬ್ಬ ಸಾರ್ವಜನಿಕ ನೌಕರನಿಗೆ ಅಡಚಣೆ ಮಾಡತಕ್ಕದ್ದಲ್ಲ.

(3) (1) ಅಥವಾ (2)ನೇಉಪ-ಪ್ರಕರಣದ ಯಾವುವೇ ಉಪಬಂಧಗಳನ್ನು ಉಲ್ಲಂಘಿಸುವ ಯಾವೊಬ್ಬನು, ಅಪರಾಧ ನಿರ್ಣಯವಾದ ಮೇಲೆ ಮೂರು ವರ್ಷಗಳಿಗೆ ವಿಸ್ತರಿಸಬಹುದಾದ ಕಾರಾವಾಸದೊಂದಿಗೆ ಮತ್ತು ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು.

6.ಸಾರ್ವಜನಿಕ ಅಥವಾ ಖಾಸಗಿ ಸ್ವತ್ತಿಗೆ ಹಾನಿಯುಂಟು ಮಾಡುವುದಕ್ಕೆ ನಿಷೇಧ.-(1) ಯಾವುದೇ ಸಾಂಕ್ರಾಮಿಕ ರೋಗದನಿ ಯಂತ್ರಣಕ್ಕಾಗಿ ನಿರ್ಬಂಧಗಳು ಮತ್ತು ವಿನಿಯಮಗಳು ಜಾರಿಯಲ್ಲಿರುವಾಗ ಯಾವುದೇ ಪ್ರದೇಶದಲ್ಲಿ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ವತ್ತಿಗೆ ನಷ್ಟ ಅಥವಾ ಹಾನಿಯುಂಟು ಮಾಡುವ ಅಪರಾಧವನ್ನು ಯಾವೊಬ್ಬ ವ್ಯಕ್ತಿಯು ಮಾಡತಕ್ಕದ್ದಲ್ಲ ಅಥವಾ ಮಾಡಲು ಪ್ರಯತ್ನಿ ಸತಕ್ಕದ್ದಲ್ಲ ಅಥವಾ ಪ್ರಚೋದಿಸತಕ್ಕದ್ದಲ್ಲ, ಕೆರಳಿಸತಕ್ಕದ್ದಲ್ಲ ಅಥವಾ ಅನ್ಯಥಾ ದುಷ್ಪ್ರೇರಿಸತಕ್ಕದ್ದಲ್ಲ.

(2) (1) ನೇ ಉಪಪ್ರಕರಣದ ಉಪಬಂಧವನ್ನು ಯಾರಾದರೂ ಉಲ್ಲಂಘಿಸಿದಲ್ಲಿ, ಆತನು ಆರು ತಿಂಗಳಿಗೆ ಕಡಿಮೆಯಲ್ಲದ ಆದರೆ ಮೂರು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಗಾಗಿ ಕಾರಾವಾಸದೊಂದಿಗೆ ಮತ್ತು ಐವತ್ತು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು.

7.ಸಾರ್ವಜನಿಕ ಅಥವಾ ಖಾಸಗಿ ಸ್ವತ್ತಿಗೆ ನಷ್ಟ ಅಥವಾ ಹಾನಿಯುಂಟು ಮಾಡಿರುವುದನ್ನು ವಸೂಲು ಮಾಡುವುದು.- (1) 6ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ದಂಡನೆಯ ಜೊತೆಗೆ ಅಪರಾಧಿಯು ಹಾನಿಗೊಳಿಸಿದ ಮತ್ತು ನಷ್ಟವನ್ನುಂಟು ಮಾಡಿದ ಸಾರ್ವಜನಿಕ ಅಥವಾ ಖಾಸಗಿ ಸ್ವತ್ತಿಗೆ, ಡೆಪ್ಯೂಟಿ ಕಮಿಷರನು ತಾನು ಸೂಕ್ತವೆಂದು ಭಾವಿಸುವ ಅಂಥ ವಿಚಾರಣೆಯ ತರುವಾಯ ನಿರ್ಧರಿಸಿದಂತೆ ಸಾರ್ವಜನಿಕ ಅಥವಾ ಖಾಸಗಿ ಸ್ವತ್ತಿನ ಮೌಲ್ಯದ ಎರಡು ಪಟ್ಟು ಮೊತ್ತದ ದಂಡನೆಗಾಗಿ ಹೊಣೆಗಾರನಾಗತಕ್ಕದ್ದು:

ಪರಂತು, ಅಪರಾಧಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದಹೊರತು ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(2) ಅಂಥ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಪ್ರಾದೇಶಿಕ ಆಯುಕ್ತರಿಗೆ ಅಪೀಲು ಸಲ್ಲಿಸಬಹುದು.

(3) (1)ನೇ ಉಪಪ್ರಕರಣದ ಅಡಿಯಲ್ಲಿ ದಂಡನೆಯ ಮೊತ್ತವನ್ನು ಪಾವತಿಸಿಲ್ಲದ ಅಪರಾಧಿಯ ಸಂದರ್ಭದಲ್ಲಿ, ಸದರಿ ಮೊತ್ತವನ್ನು ಕರ್ನಾಟಕ ಭೂಕಂದಾಯ ಅಧಿನಿಯಮ, 1964ರ (1964 ರ ಕರ್ನಾಟಕ ಅಧಿನಿಯಮ 12) ಉಪಬಂಧಗಳ ಅಡಿಯಲ್ಲಿ, ಅದನ್ನು ಭೂಕಂದಾಯದ ಹಿಂಬಾಕಿಗಳಂತೆ ವಸೂಲು ಮಾಡತಕ್ಕದ್ದು.

(4) ಅಂಥ ವಸೂಲಾತಿಯ ಮುಂದುವರಿಕೆಯಲ್ಲಿ, ಡೆಪ್ಯೂಟಿ ಕಮಿಷನರನು ಅಧಿಸೂಚನೆಯ ಮೂಲಕ, ಸಕ್ಷಮ ನ್ಯಾಯಾಲಯವು ಅದನ್ನು ನಿರುಪಾಧಿಕಗೊಳಿಸುವುದಕ್ಕೆ ಒಳಪಟ್ಟು ಆತನ ಸ್ವತ್ತನ್ನು ತಾತ್ಕಾಲಿಕವಾಗಿ ಜೋಡಣೆ ಮಾಡಬಹುದು ಮತ್ತು ಅಂಥ ಬಾಕಿಗಳೆದೆಗೆ ಸ್ವತ್ತನ್ನು ಅಭಿಗ್ರಹಣ ಮತ್ತು ಮುಟ್ಟುಗೋಲು ಮಾಡಲು ನಿರ್ದೇಶಿಸಬಹುದು.

8.ಅಪರಾಧಗಳ ದುಷ್ಪ್ರೇರಣೆ.- ಯಾರಾದರೂ ಈ ಅಧ್ಯಾದೇಶದ ಅಡಿಯಲ್ಲಿನ ಯಾವುದೇ ಅಪರಾಧವನ್ನು ದುಷ್ಪ್ರೇರಿಸಿದ್ದಲ್ಲಿ ಹಾಗೂ ದುಷ್ಪ್ರೇರಣೆಯ ಪರಿಣಾಮದಿಂದ ಕೃತ್ಯವನ್ನು ಎಸಗಿದ್ದಲ್ಲಿ, ಆತನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದೊಂದಿಗೆ ಅಥವಾ ಹತ್ತುಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

9.ಈ ಅಧ್ಯಾದೇಶ ದಅಡಿಯಲ್ಲಿನ ಅಪರಾಧವು ಸಂಜ್ಞೇಯ ಮತ್ತು ಜಾಮೀನೀಯವಾಗಿರುವುದು.- ಕ್ರಿಮಿನಲ್ಪ್ರಕ್ರಿಯಾಸಂಹಿತೆ, 1973ರಲ್ಲಿ (1974ರಕೇಂದ್ರಅಧಿನಿಯಮ 2) ಏನೇ ಒಳಗೊಂಡಿದ್ದರೂ ಈ ಅಧ್ಯಾದೇಶದ ಅಡಿಯಲ್ಲಿಯ ಎಲ್ಲಾ ಅಪರಾಧಗಳು ಸಂಜ್ಞೇಯ ಮತ್ತು ಜಾಮೀನೀಯವಾಗಿರತಕ್ಕದ್ದು.

10. ಅಧ್ಯಾದೇಶವು ಯಾವುದೇ ಇತರ ಕಾನೂನಿಗೆ ಅಲ್ಪವಾಗಿರುವಂತಿಲ್ಲ.–ಈ ಅಧ್ಯಾದೇಶದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳಿಗೆ ಹೆಚ್ಚುವರಿಯಾಗಿರತಕ್ಕದ್ದು ಮತ್ತು ಅಲ್ಪವಾಗಿರತಕ್ಕದ್ದಲ್ಲ.

11.ಕೆಲವು ವ್ಯಕ್ತಿಗಳು ಸಾರ್ವಜನಿಕ ನೌಕರರರಾಗಿರುವುದು.–ಈ ಅಧ್ಯಾದೇಶದ ಯಾವುವೇ ಉಪಬಂಧಗಳ ಅನುಸರಣೆಯಲ್ಲಿ ಕಾರ್ಯವನ್ನು ಕೈಗೊಂಡಾಗ ಅಥವಾ ಕಾರ್ಯವನ್ನು ಕೈಗೊಂಡಿದೆ ಎಂದು ತಾತ್ಪರ್ಯವಾಗುವಾಗ ಎಲ್ಲಾ ಅಧಿಕಾರಿಗಳು, ನೌಕರರು ಮತ್ತು ಇತರ ವ್ಯಕ್ತಿಗಳನ್ನು ಭಾರತದಂಡ ಸಂಹಿತೆ (1860ರ ಕೆಂದ್ರ ಅಧಿನಿಯಮ 45) 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಸಾರ್ವಜನಿಕ ನೌಕರರೆಂದು ಭಾವಿಸತಕ್ಕದ್ದು.

12. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–ಈ ಅಧ್ಯಾದೇಶದ ಮೂಲಕ ಅಥವಾ ಅದರಡಿಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಬೇಕೆಂದು ಉದ್ದೇಶಿಸಲಾದ ಯಾವುದಕ್ಕಾದರೂ ಯಾವೊಬ್ಬ ವ್ಯಕ್ತಿಯ ವಿರುದ್ಧಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

13. ಕಂಪನಿಗಳಿಂದ ಅಪರಾಧಗಳು.Š (1) ಈ ಅಧ್ಯಾದೇಶದ ಅಡಿಯಲ್ಲಿ ಅಪರಾಧವನ್ನು ಒಂದು ಕಂಪನಿಯು ಮಾಡಿದ್ದಲ್ಲಿ, ಅಪರಾಧವು ನಡೆದ ಕಾಲದಲ್ಲಿ ಆ ಕಂಪನಿಯ ವ್ಯವಹರಣೆಗಳ ನಿರ್ವಹಣೆಗಾಗಿ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಅದಕ್ಕೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಕಂಪನಿಯನ್ನು ಆಅಪರಾಧದ ದೋಷಿಯೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವರ ವಿರುದ್ಧದ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, ಅಂಥ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವನ್ನು ತಡೆಗಟ್ಟಲು ತಾನು ಯಥೋಚಿತವಾದ ಜಾಗರೂಕತೆಯನ್ನು ವಹಿಸಿದ್ದೆನೆಂದು ಅಂಥ ಯಾವೊಬ್ಬ ವ್ಯಕ್ತಿಯು ರುಜುವಾತುಪಡಿಸಿದರೆ, ಈ ಉಪಪ್ರಕರಣದಲ್ಲಿಒಳಗೊಂಡಿರುವುದು ಯಾವುದೂ, ಯಾವುದೇ ಶಿಕ್ಷೆಗೆ ಅಂಥ ವ್ಯಕ್ತಿಯನ್ನು ಗುರಿಯಾಗುವಂತೆ ಮಾಡತಕ್ಕದ್ದಲ್ಲ.

(2) (1) ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧ್ಯಾದೇಶದ ಅಡಿಯಲ್ಲಿಯ ಒಂದು ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾವೊಬ್ಬ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಅಥವಾ ಅವನ ಕಡೆಯಿಂದಾದ ಯಾವುದೇ ನಿರ್ಲಕ್ಷ್ಯದ ಕಾರಣದಿಂದ ಸಂಭವಿಸಿತೆಂದು ಹೇಳಬಹುದಾದರೆ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ಬಗ್ಗೆ ದೋಷಿಯೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವನುತನ್ನ ವಿರುದ್ಧದ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು.

ವಿವರಣೆ.ಓ ಈ ಪ್ರಕರಣದ ಉದ್ದೇಶಕ್ಕಾಗಿ,ಓ

(ಎ) ``ಕಂಪನಿ'' ಎಂದರೆ, ಒಂದು ನಿಗಮಿತ ನಿಕಾಯ ಮತ್ತುಇದು ಒಂದು ಫರ್ಮು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ``ನಿರ್ದೇಶಕ'' ಎಂದರೆ, ಒಂದು ಫರ್ಮಿನ ಸಂಬಂಧದಲ್ಲಿ ಫರ್ಮಿನ ಒಬ್ಬ ಪಾಲುದಾರ.

14. ತೊಂದರೆಗಳ ನಿವಾರಣೆ ಅಧಿಕಾರ.–ಈ ಅಧ್ಯಾದೇಶದ ಉಪಬಂಧಗಳನ್ನು ಜಾರಿಗೆತರುವಲ್ಲಿ, ಯಾವುದೇ ತೊಂದರೆ ಉದ್ಭವಿಸಿದರೆ, ಆ ತೊಂದರೆಯ ನಿವಾರಣೆಗಾಗಿ, ಈ ಅಧ್ಯಾದೇಶದ ಉಪಬಂಧಗಳಿಗೆ ಅಸಂಗತವಾಗದ ತಾನು ಅವಶ್ಯಕ ಮತ್ತು ಯುಕ್ತವೆಂದು ಅಭಿಪ್ರಾಯ ಪಡುವಂಥ ಉಪಬಂಧಗಳನ್ನು ಸರ್ಕಾರವು ರಾಜ್ಯಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ಮಾಡಬಹುದು:

ಪರಂತು, ಈ ಅಧ್ಯಾದೇಶದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳು ಮುಕ್ತಾಯವಾದ ತರುವಾಯ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

15. ನಿಯಮಗಳ ಮತ್ತು ವಿನಿಯಮಗಳ ರಚನಾಧಿಕಾರ.ಓ (1) ಈ ಅಧ್ಯಾದೇಶದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ರಾಜ್ಯ ಸರ್ಕಾರವು ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಉತ್ತರಾನ್ವಯವಾಗಿಯಾಗಲೀ ಅಥವ ಪೂರ್ವಾನ್ವಯವಾಗಿಯಾಗಲೀ ನಿಯಮಗಳನ್ನು ರಚಿಸಬಹುದು.

(2) ಈ ಅಧ್ಯಾದೇಶದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮಗಳು ಮತ್ತು ವಿನಿಯಗಮಗಳನ್ನು ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಉಭಯಸದನಗಳು ಅಧಿವೇಶನದಲ್ಲಿರುವಾಗ, ಒಂದು

ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚಿನ ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನಗಳ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮೊದಲು ಆ ನಿಯಮ ಅಥವಾ ವಿನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಿದಲ್ಲಿ ಮತ್ತು / ಅಥವಾ ಮಾಡಕೂಡದೆಂದು ಉಭಯ ಸದನಗಳು ನಿರ್ಧರಿಸಿದಲ್ಲಿ, ಅದರ ತರುವಾಯ ಆನಿಯಮ ಅಥವಾ ವಿನಿಯಮವು ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಸಂದರ್ಭಾನುಸಾರವಾಗಿ ಯಾವುದೇ ಪರಿಣಾಮ ಹೊಂದಿರತಕ್ಕದ್ದಲ್ಲ, ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಆ ನಿಯಮ ಅಥವಾ ವಿನಿಯಮದ ಅಡಿಯಲ್ಲಿ ಹಿಂದೆ ಮಾಡಿದ ಯಾವುದೇ ಕೃತ್ಯದ ಮಾನ್ಯತೆಗೆ ಬಾಧಕವಾಗತಕ್ಕದ್ದಲ್ಲ.

16. ನಿರಸನ ಮತ್ತು ಉಳಿಸುವಿಕೆ.– (1) ಸಾಂಕ್ರಾಮಿಕ ರೋಗಗಳ ಅಧಿನಿಯಮ, 1897ನ್ನು (1897ರ ಮೈಸೂರು ಅಧಿನಿಯಮ II) ಮತ್ತು ಹೈದರಾಬಾದ್ ಸೋಂಕು ರೋಗಗಳ ಅಧಿನಿಯಮ, 1950ನ್ನು (1956 ರ ಕೇಂದ್ರ ಅಧಿನಿಯಮ XII) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಈ ಅಧ್ಯಾದೇಶದ ಪ್ರಾರಂಭದ ದಿನಾಂಕದಿಂದ, ಸಾಂಕ್ರಾಮಿಕ ರೋಗಗಳ ಅಧಿನಿಯಮ, 1897ರ (1897ರ ಕೇಂದ್ರ ಅಧಿನಿಯಮ 3) ಉಪಬಂಧಗಳು ಕರ್ನಾಟಕ ರಾಜ್ಯಕ್ಕೆ ಅನ್ವಯವಾಗತಕ್ಕದ್ದಲ್ಲ.

(3) ಅಂಥ ನಿರಸನದಲ್ಲಿ ಏನೇ ಒಳಗೊಂಡಿದ್ದರೂ, ಸಾಂಕ್ರಾಮಿಕ ರೋಗಗಳ ಅಧಿನಿಯಮ, 1897ರ (1897 ರ ಮೈಸೂರು ಅಧಿನಿಯಮ II) ಮತ್ತು ಹೈದರಾಬಾದ್ ಸೋಂಕು ರೋಗಗಳ ಅಧಿನಿಯಮ, 1950ರ (1956ರ ಕೇಂದ್ರ ಅಧಿನಿಯಮ XII) ಮತ್ತು ಸಾಂಕ್ರಾಮಿಕ ರೋಗಗಳ ಅಧಿನಿಯಮ, 1897ರ (1897ರ ಕೇಂದ್ರ ಅಧಿನಿಯಮ 3) ಅಡಿಯಲ್ಲಿ ಮಾಡಿದ ಯಾವುದೇ ಕಾರ್ಯ ಅಥವಾ ಮಾಡಲಾಗಿದೆ ಎಂದು ಭಾವಿಸುವ ಯಾವುದೇ ಕಾರ್ಯವನ್ನು ಅಥವಾ ಕೈಗೊಂಡ ಯಾವುದೇ ಕ್ರಮ ಅಥವಾ ಕೈಗೊಳ್ಳಾಗಿದೆ ಎಂದು ಭಾವಿಸುವ ಯಾವುದೇ ಕ್ರಮವನ್ನು ಈ ಅಧ್ಯಾದೇಶದ ಅಡಿಯಲ್ಲಿ ಮಾಡಲಾಗಿದೆ ಎಂದು ಭಾವಿಸತಕ್ಕದ್ದು.

17. ತಾತ್ಕಾಲಿಕ ಉಪಬಂಧಗಳು.-ಅಂಥ ನಿರಸನದಲ್ಲಿ ಏನೇ ಒಳಗೊಂಡಿದ್ದರೂ ನಿರಸಿತ ಅಧಿನಿಯಮಗಳ ಅಡಿಯಲ್ಲಿ ಮಾಡಲಾದ ಯಾವುದೇ ನಿಯಮ, ವಿನಿಯಮ, ಅಧಿಸೂಚನೆ ಅಥವಾ ಆದೇಶವು, ಈ ಅಧ್ಯಾದೇಶದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಈ ಅಧ್ಯಾದೇಶದ ಅಡಿಯಲ್ಲಿ ಹೊಸ ನಿಯಮಗಳನ್ನು ರಚಿಸುವವರೆಗೂ, ತಿದ್ದುಪಡಿ ಮಾಡುವವರೆಗೂ ಅಥವಾ ಬದಲಾಯಿಸುವವರೆಗೂ ಮುಂದುವರೆಯತಕ್ಕದ್ದು.

ವಜುಭಾಯಿ ವಾಲಾ

ಕರ್ನಾಟಕದ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತುಅವರ

ಹೆಸರಿನಲ್ಲಿ,

(ಕೆ. ದ್ವಾರಕನಾಥ್ ಬಾಬು)

ಸರ್ಕಾರದಕಾರ್ಯದರ್ಶಿ

ಸಂಸದೀಯ ವ್ಯವಹಾರಗಳು ಮತ್ತು

ಶಾಸನ ರಚನೆ ಇಲಾಖೆ.

PARLIAMENTARY AFFAIRS AND LEGISLAITON SECRETARIAT

NOTIFICATION

No. DPAL 25 SHASANA 2020, Bengaluru, dated: 22.04.2020

THE KARNATAKA EPIDEMIC DISEASES ORDINANCE, 2020 - EzP 2020g ಏಪ್ರಿಲ್ wAU¼ 22 £Ã ¢£ÁAPzAzÄ gÁd¥Á®g M¦U zÆgwzÄ, ¸Á¨iÁ£ w¼Ä¨½PUÁV Ez£Ä 2020g P£Áð¼P CzÁzÃ± ¸ASï: 07 JA§ÄzÁV P£Áð¼P gÁd ¥vz° ¥Pn¸¨ÃPAzÄ DzÃ²¸¯ÁVz.

KARNATAKA ORDINANCE NO. 07 OF 2020

THE KARNATAKA EPIDEMIC DISEASES ORDINANCE, 2020

(Promulgated by the Governor of Karnataka in the Seventy first year of the Republic of India and First published in the Karnataka Gazette Extra-ordinary on the 22nd day of April,2020)

An Ordinanceto unify and consolidate the laws relating to the regulation and prevention of epidemic diseasesin the State of Karnataka.

Whereas both the Houses of the state legislature are not in session andHonourable Governor of Karnataka is satisfied that the circumstances exist which render it necessary for him to take immediate action, to makethe Karnataka Epidemic Diseases Ordinance, 2020for the purposes hereinafter appearing;

Now, therefore in exercise of the powers conferred by clause (1) of Article 213 of the Constitution of India, HonourableGovernor of Karnataka is pleased to promulgate the following Ordinance, namely:-

1. Short title, extent and commencement.- (1) This Ordinancemay be called the Karnataka Epidemic DiseasesOrdinance, 2020.

(2) It shall extend to the whole of State of Karnataka.

(3) It shall come into force at once.

2. Definitions.- In this Ordinance, unless the context otherwise requires,-

(a) "epidemic disease" means any disease declared as epidemic disease by notification published in the official Gazette, by the Government;

(b) "Government" means the Government of Karnataka;

(c) "prescribed" means prescribed by rules or regulations made under this Ordinance;

(d) "regulations" means the regulations made under this Ordinance; and

(e) "State" means the State of Karnataka.

3.Power of Government to notify epidemic disease.- Government may by notification in the official Gazette notify any disease as epidemic disease, for the purposes of this Ordinance, either throughout the State or in such part or parts thereof as may be specified in the notification.

4. Power to take special measures and specify regulations as to epidemic disease.- (1) When at any time the Government is satisfied that the State or any part thereof is visited by or threatened with an outbreak of any epidemic disease, the Government may take such measures, as it deems necessary for the purpose, by notification in the Official Gazette specify such temporary regulations or orders to be observed by the public or by any person or class of persons so as to prevent the outbreak of such disease or the spread thereof and require or empower Deputy Commissioner and/orMunicipal Commissioners to exercise such powers and duties as may be specified in the said regulations or orders.

(2) In particular and without prejudice to the generality of the foregoing provisions, the Government may take measures and specify regulations,-

(a) to prohibit any usage or act which the Government considers sufficient to spread or transmit epidemic diseases from person to person in any gathering, celebration, worship or other such activities within the State;

(b) to inspect the persons arriving in the State by air, rail, road, sea or any other means or in quarantine or in isolation, as the case may be, in hospital, temporary accommodation, home or otherwise of persons suspected of being infected with any such disease by the officers authorized in the regulation or orders;

(c) to seal State or district borders for such period as may be deemed necessary;

(d) to impose restrictions on the operation of public and private transport;

(e) to prescribe social distancing norms;

(f) to restrict or prohibit congregation of persons in public places and religious institutions;

(g) to regulate or restrict the functioning of offices, Government and Private and educational institutions in the State;

(h) to impose prohibition or restrictions on the functioning of shops and commercial establishments, factories, workshops and godowns;

(i) to restrict duration of services in essential or emergency services such as banks, media, health care, food supply, electricity, water, fuel, etc,;

(j) to restrictsocial, political, sports, entertainment, academic, cultural or religious functions or gatherings; and

(k) such other measures as may be necessary for the regulation and prevention of epidemic diseases as decided by the Government.

5. Prohibition of Contravention or obstruction of Public Servant.- (1) No person, institution or company shall contravene or disobey any of the provisions of Section 4, rules, regulation or order made under this ordinance.

(2) No person shall obstruct any officer or any Public Servant while acting or purporting to act or discharging any duty in pursuance to any provisions of this ordinance, rules, regulations or orders made there under.

(3) Whoever contravenes any of the provisions of sub-section (1) or (2) shall on conviction be punished with imprisonment for a term which may extend to three years and with a fine which may extend to fifity thousand rupees.

6. Prohibition for causing damage to public or private property. –(1) No person shall commit or attempt to commit or instigate, incite or otherwise abet the commission of offence to cause loss or damage to any public or private property in any area when restrictions and regulations are in force to contain any epidemic disease.

(2) Whoever contravenes the provisionof sub-section (1)shall be punished with imprisonment for a term which shall not be less than six months but which may extend to three years and with fine which may extend to fifty thousand rupees.

7. Recovery of loss for damage caused to the public or privateproperty.-(1) In addition to the punishment specified in section 6 the offender shall also be liable for a penalty of twice the value of public or private property damaged and loss caused to the public or private property as determined by the Deputy Commissioner after such enquiry as he deems fit:

Provided that no such order shall be made without giving an opportunity being heard to the offender.

(2) Any person aggrieved by such order may appeal to the Regional Commissioner within thirty days from the date of receipt of the order.

(3) In case the offender has not paid the penal amount under sub section (1), the said amount shall be recovered under the provisions of the Karnataka Land Revenue Act, 1964 (Karnataka Act 12 of 1964) as if it were to be an arrears of land revenue.

(4) In furtherance of such recovery the Deputy Commissioner may by notification make provisional attachment of his property available and direct seizure and forfeiture of property towards such dues subject to making it absolute by the competent court

8. Abetment of offences.- Whoever, abets any offence under this Ordinance and if the act abetted is committed in consequence of the abetment, shall be punishable with imprisonment for a term which may extend to two years or with fine which may extend to ten thousand rupees or with both.

9. Offence under this Ordinance to be cognizable and bailable.- Notwithstanding anything contained in the Code of Criminal Procedure, 1973 (Central Act 2 of 1974) all offences under this Ordinance shall be cognizable and bailable.

10. Ordinance not in derogation of any other law.- The provisions of this Ordinanceshall be in addition to and not in derogation of the provisions of any other law for the time being in force.

11. Certain persons to be public servants.- All officers, servants and other persons shall be deemed, when acting or purporting to act in pursuance of any of the provisions of this

Ordinance, to be public servants within the meaning of section 21 of the Indian Penal Code (Central Act 45 of 1860).

12. Protection of action taken in good faith.- No suit, prosecution or other legal proceedings shall lie against any person for anything which is done in good faith or intended to be done by or under this Ordinance.

13. Offences by Companies.- (1) Where an offence under this Ordinance has been committed by a Company, every person who, at the time the offence was committed was in charge of, and was responsible to, the company for the conduct of the business of the Company, as well as the company shall be deemed to be guilty of the offence and shall be liable to be proceeded against and punished accordingly:

Provided that nothing contained in this sub-section shall render any such person liable to any punishment, if he proves that the offence was committed without his knowledge or that he exercised all due diligence to prevent the commission of such offence.

(2) Notwithstanding anything contained in sub-section (1), where an offence under this Ordinancehas been committed by a company and it is proved that the offence has been committed with the consent or connivance of or is attributable to any neglect on the part of any director, manager, secretary, or other officer to the company, such director, manager, secretary or other officer of the company shall also be deemed to be guilty of that offence and shall be liable to be proceeded against and punished accordingly.

Explanation.- For the purpose of this section.-

(a) "company" means any body corporate and includes a firm or other association of individuals and

(b) "director" in relation to a firm, means a partner in the firm

14. Power to remove difficulties.- If any difficulty arises in giving effect to the provisions of this Ordinance, the Government may, by order published in the Gazette, make provisions not inconsistent with the provisions of this Ordinance which appear to it to be necessary or expedient, for removing the difficulty;

Provided that no such order shall be made after the expiry of a period of two years from the date of commencement of this Ordinance.

15. Power to make rules and regulations.- (1) The Government may, by notification in the Gazette,make rules either prospectively or retrospectively for the purpose of carrying into effect the provisions of this Ordinance.

(2) Every rules and regulations made under this Ordinance shall be laid, as soon as may be after it is made, before each house of the State Legislature while it is in session for a total period of thirty days which may be comprised in one session or two more successive sessions and if before expiry of the session in which it is laid or the session immediately following; both houses agree in making any modification in the rule or regulations or decides that the rule and/or regulation should not be made, the rule or regulation shall thereafter have effect only in such modified form or be of no effect, as the case may be, so however, that any such modification or annulment shall be without prejudice to the validity of anything previously done under that rule or regulation.

16. Repeal and saving.- (1) The Epidemic Diseases Act, 1897 (Mysore Act II of 1897) and the Hyderabad Infectious Diseases Act, 1950 (Hyderabad Act XII of 1950) are hereby repealed.

(2) From the date of commencement of this Ordinance, the provisions of Epidemic Diseases Act, 1897 (Central Act 3 of 1897) shall have no application to the State of Karnataka.

(3) Notwithstanding such repeal, anything done or deemed to have been done or any action taken or deemed to have been taken under the Epidemic Diseases Act, 1897 (Mysore Act II of 1897) and the Hyderabad Infectious Diseases Act, 1950 (Hyderabad Act XII of 1950) and the Epidemic Diseases Act, 1897 (Central Act 3 of 1897) shall be deemed to have been done under this Ordinance.

17. Transitory Provisions.- Notwithstanding such repeal any rule, regulation, notification or order made under the repealed Acts shall continue till new rules are made, amended or altered under this Ordinancefor the purpose of carrying out the provisions of this Ordinance.

VAJUBHAI VALA
GOVERNOR OF KARNATAKA

By order and in the name of the
Governor of Karnataka,

(K. DWARAKANATH BABU)
Secretary to Government
Department of Parliamentary Affairs
and Legislation.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE Digitally signed by SUNIL GARDE
Date: 2020.09.23 19:23:37 +05'30'